Our Association is at present giving scholarships to twenty-seven students studying in various schools and colleges in Bangalore, in addition to a small contribution towards the maintenance of a Sanskrit Patasala. Further the Association is also maintaining a small students' Hostel in Bangalore, with a Committee appointed to manage its affairs. We are at present confronted with a serious difficulty to provide suitable hostel accommodation for our students. We are badly in need of a convenient site for our hostel which Mr Siddlabasappa of Attibele, Anekal Taluk, has generously undertaken to build. We therefore hope that our prayer which is pending before Government will soon be granted enabling the donor to fulfil his long cherished object.

At the time of your elevation to this exalted Office of the Dewan to His Highness the Maharaja of Mysore, our Association presented a congratulatory Address bringing to your notice some of our needs and aspirations, particularly the introduction of free and compulsory education, establishment of more schools, and an adequate representation of our educated and deserving young men in higher grades in the public service. We are glad to observe that something has already been done in the sphere of education and we feel sure that during your regime our other expectations will be fully realised.

We take this opportunity to express our deep loyalty to His Highness the Maharaja and to state that we are peaceful, happy and contented under His Highness' benign rule.

It is a matter for particular gratification to us that His Highness the Yuvaraja has set a good and praiseworthy example to the people by undertaking a tour in Europe and has come back with valuable experience and knowledge gained in the course of his tour in the more advanced countries in the West.

We are gratified to learn that during the past year a great impetus has been given to the cause of primary education, industrial development, and agricultural improvements. Local Self Government has also been receiving your earnest attention; and you have given practical proofs of it by appointing non-official Vice-Presidents to a few District Municipalities, besides appointing a non-official Honorary President to the Bangalore City Municipality.

In conclusion we pray for your long life, health and prosperity to enable you to fulfil the best hopes and aspirations of the people of our country.

We beg to subscribe ourselves,
Respected sir,
Your most obedient servants,
The members of the Lingayet Education Fund Association.

Translation of the above.

IV.

ಮೈಸೂರು ಲಿಂಗಾಯತ ಫಂಡ್ ಸಂಘದ ಮೆಂಬರುಗಳು ಒಪ್ಪಿಸಿದ
ಅಭಿನಂದನಪತ್ರಿಕೆಯ ಭಾಷಾಂತರ.

ಮೈಸೂರು ಸಂಸ್ಥಾನದ ದಿವಾಕರಾದ ಶ್ರೀಮರ್ ವಿಶ್ವೇಶ್ವರಯ್ಯ, ಬಿ.ಎ., ಸಿ.ಐ.ಯಿ., ಯವರ ಸನ್ನಿಧಿಗೆ.

ಮೈಸೂರು ಸೀಮೆಯಲ್ಲಿರುವ ಲಿಂಗಾಯತರ ವಿದ್ಯಾಭ್ಯಾಸವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿಯೂ ವೀರಶೈವ ಪಂಗಡಕ್ಕೆ ಸೇರಿದ ಜನರನ್ನು ಏಳ್ಗೆಗೂ ಪುರೋಭಿವೃದ್ಧಿಗೂ ತರುವುದಕ್ಕಾಗಿಯೂ ಸ್ಥಾಪಿಸಲ್ಪಟ್ಟಿರುವ ಮೈಸೂರು ಲಿಂಗಾಯತರ ವಿದ್ಯಾಭ್ಯಾಸದ ಫಂಡಿನ ಸಂಘದವರ ಪರವಾಗಿ ನಾನು ವಿಜ್ಞಾಪಿಸುವುದೇನೆಂದರೆ :—ಪ್ರತಿ ವರ್ಷದ ಪ್ರಜಾಪ್ರತಿನಿಧಿ ಸಭೆಗೆ ನಮ್ಮ ಸಂಘದಿಂದ ಒಬ್ಬ ಮೆಂಬರನ್ನು ಕಳುಹಿಸಿಕೊಡುವ ಹಕ್ಕನ್ನು ಉಂಟುಮಾಡಿಕೊಟ್ಟಿರುವುದಕ್ಕೋಸ್ಕರ ಸದರಿ ಸಂಘದ ಪರವಾಗಿ ನಾನು ತಮಗೆ ನಿಜವಾಗಿ ಮನಃಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ.

ಈ ಸಂಘವು ಈ ಸೀಮೆಯಲ್ಲಿ ವ್ಯಾಪಾರವೇ ಮುಖ್ಯವಾದ ಕಸಬಾಗಿ ಉಳ್ಳ ಪಂಗಡದವರಿಗೆ ಪ್ರತಿನಿಧಿಯಾಗಿರುವುದಲ್ಲದೆ, ವ್ಯವಸಾಯ ಕಸಬನ್ನೂ ಮಾಡುವ ಅನೇಕರನ್ನು ಒಳಗೊಂಡು ಈ ಸಂಸ್ಥಾನದ ಪ್ರಜಾಸಂಖ್ಯೆಯ ಪೈಕಿ 7ರಲ್ಲಿ ಒಂದು ಭಾಗದಷ್ಟು ಜನಗಳ ಅಭಿಪ್ರಾಯಗಳನ್ನು ಸೂಚಿಸಿತಕ್ಕದ್ದಾಗಿರುತ್ತದೆ. ಈ ಕಾರಣದಿಂದ ನ್ಯಾಯವಿಧಾಯಕ ಸಭೆ ಮತ್ತು ಎಕನಾಮಿಕ್ ಕಾನ್‌ಫರೆನ್ಸಿನಂತಹ ಇತರ ಸಮಾಜಗಳಲ್ಲಿ ಈ ಸಂಘದ ಪರವಾಗಿ ಒಬ್ಬೊಬ್ಬ ಮೆಂಬರನ್ನು ಕಳುಹಿಸಲು ನಮಗೆ ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡರೆ ಅದು ಅಯುಕ್ತವೆನಿಸಲಾರದೆಂದು ಎಣಿಸುತ್ತೇವೆ.

ಪ್ರಕೃತದಲ್ಲಿ ನಮ್ಮ ಸಂಘದವರು ಒಂದು ಸಂಸ್ಕೃತ ಪಾಠಶಾಲೆಯ ಪೋಷಣೆಗಾಗಿ ಸ್ವಲ್ಪ ದ್ರವ್ಯವನ್ನು ಕೊಡುತ್ತಿರುವುದರ ಜೊತೆಗೆ, ಬೆಂಗಳೂರಲ್ಲಿ ಬೇರೆಬೇರೆ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವ್ಯಾಸಂಗವನ್ನು ಮಾಡುತ್ತಿರುವ ಬಡ ಮತ್ತು ಮಧ್ಯಮದ ವಿದ್ಯಾರ್ಥಿಗಳಿಗೆ ವೇತನಗಳನ್ನೂ ಕೊಡುತ್ತಲಿದ್ದಾರೆ. ಇದೂ ಅಲ್ಲದೆ ಬೆಂಗಳೂರಲ್ಲಿ ಒಂದು ಸ್ಟೂಡೆಂಟ್ಸ್ ಹಾಸ್ಟಲೆಂಬ ವಿದ್ಯಾರ್ಥಿ ನಿಲಯವನ್ನೂ ಸಹ ಈ ಸಂಘದವರು ನಡಿಸಿಕೊಂಡು ಬರುತ್ತಲಿದ್ದಾರೆ. ಈ ನಿಲಯದ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಒಂದು ಕಮಿಟಿಯನ್ನೂ ನೇಮಿಸಿರುತ್ತಾರೆ. ಈಗ ನಮ್ಮ ವಿದ್ಯಾರ್ಥಿಗಳಿಗೆ ಅರ್ಹವಾದ ಹಾಸ್ಟೆಲ್ ಸ್ಥಳವನ್ನು ಒದಗಿಸುವ ದೊಡ್ಡ

ಕಷ್ಟ ಬಂದು ಈ ಸಂಘದವರಿಗೆ ಪ್ರಾಪ್ತವಾಗಿರುತ್ತದೆ. ಅನೇಕಲ್ಲು ತಾಲ್ಲೂಕು ಅತ್ತಿಬೆಲೆಯಲ್ಲಿರುವ ಮಿ॥ ಶಿಡ್ಲಬಸಪ್ಪನವರು ಬಂದು ಹಾಸ್ಟಲು ಕಟ್ಟಡವನ್ನು ಕಟ್ಟಿಸಿಕೊಡುವುದಾಗಿ ತಮ್ಮ ಉದಾರಭಾವವನ್ನು ತಿಳಿಸಿರುತ್ತಾರೆ, ಆದರೆ ಸದರಿ ಕಟ್ಟಡಕ್ಕೆ ಅನುಕೂಲವಾದ ಸ್ಥಳ ದೊರೆಯದೆ ಪೇಚಾಡುತ್ತಿದ್ದೇವೆ. ಆದುದರಿಂದ, ಸರ್ಕಾರದವರ ಅವೆಗಾಹನೆಗೆ ತರಲ್ಪಟ್ಟರುವ ನಮ್ಮ ವಿಜ್ಞಾಪನೆಯನ್ನು ಶೀಘ್ರದಲ್ಲಿಯೇ ನಡಿಸಿಕೊಟ್ಟು, ಈ ಧರ್ಮಾತ್ಮರ ಬಹುದಿನದ ಅಭಿಲಾಷೆಯು ನೆರವೇರುವಂತೆ ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ನಮ್ಮ ಮೈಸೂರು ಶ್ರೀಮೆ ಮಹಾರಾಜಾಸಾಹೇಬ್ಬಹಾದುರವರು ತಮ್ಮನ್ನು ಈ ಮಹೋನ್ನತವಾದ ದಿವಾನ ಪದವಿಗೆ ನೇಮಿಸಿದ ಕಾಲದಲ್ಲಿ, ನಮ್ಮ ಆವಶ್ಯಕತೆಗಳನ್ನೂ ಆಶಯಗಳನ್ನೂ ಎಂದರೆ ಮುಖ್ಯವಾಗಿ ಮುಫತ್ತಾಗಿಯೂ ನಿರ್ಬಂಧದಿಂದಲೂ ವಿದ್ಯಾಭ್ಯಾಸ ಮಾಡಿಸುವ ಕ್ರಮವನ್ನು ಜಾರಿಗೆ ತರುವುದು, ಇನ್ನೂ ಹೆಚ್ಚು ಸ್ಕೂಲುಗಳನ್ನು ಸ್ಥಾಪಿಸುವುದು, ಸರ್ಕಾರೀ ನೌಕರಿಯಲ್ಲಿ ದೊಡ್ಡ ದೊಡ್ಡ ನೌಕರಿಗಳಿಗೆ ನಮ್ಮ ಪಂಗಡದವರ ಪೈಕಿ ವಿದ್ಯಾಭ್ಯಾಸವನ್ನು ಮಾಡಿ ಅರ್ಹರಾಗಿರುವವರನ್ನು ತಕ್ಕಮಟ್ಟಿಗೆ ನೇಮಿಸುವುದು, ಈ ಮುಂತಾದ ಕೆಲವು ವಿಷಯಗಳನ್ನು ತಮ್ಮ ಅವಧಾನಕ್ಕೆ ತಂದು ಒಂದು ಅಭಿನಂದನ ಪತ್ರಿಕೆಯನ್ನು ತಮಗೆ ಒಪ್ಪಿಸಿದೆವು. ವಿದ್ಯಾಭ್ಯಾಸದ ವಿಷಯದಲ್ಲಿ ಈಗಾಗಲೇ ಸ್ವಲ್ಪ ಅನುಕೂಲ್ಯವನ್ನು ಕಲ್ಪಿಸಿರುವುದಕ್ಕೆ ಸಂತೋಷಿಸುವೆವಲ್ಲದೆ, ತಮ್ಮ ದಿವಾನಗಿರಿಯ ಕಾಲದಲ್ಲಿ ನಮ್ಮ ಉಳಿದ ಕೋರಿಕೆಗಳನ್ನೂ ಸಂಪೂರ್ಣವಾಗಿ ನೆರವೇರಿಸಿ ಕೊಡುವಿರೆಂದು ನಾವು ದೃಢವಾಗಿ ನಂಬಿರುತ್ತೇವೆ.

ನಮ್ಮ ಶ್ರೀಮೆ ಮಹಾರಾಜಾಸಾಹೇಬ್ಬಹಾದುರವರಲ್ಲಿ ನಮಗಳಿಗಿರುವ ಅತಿಶಯವಾದ ರಾಜ ಭಕ್ತಿಯನ್ನು ಈ ಸಂದರ್ಭದಲ್ಲಿ ತಿಳಿಸಲಪೇಕ್ಷಿಸುತ್ತೇವಲ್ಲದೆ, ಶ್ರೀಮೆ ಮಹಾರಾಜರವರ ದಯಾಪೂರಿತವಾದ ಪ್ರಭುತ್ವದಲ್ಲಿ ನಾವುಗಳು ಸಮಾಧಾನಚಿತ್ತರಾಗಿಯೂ, ಸೌಖ್ಯವುಳ್ಳವರಾಗಿಯೂ, ತೃಪ್ತರಾಗಿಯೂ ಇದೇವೆಂದು ವಿಜ್ಞಾಪಿಸುತ್ತೇವೆ.

ನಮ್ಮ ಶ್ರೀಮದ್ಯುವರಾಜರವರು ಯೂರೊಪಖಂಡದಲ್ಲಿ ಸಂಚಾರವನ್ನು ಮಾಡುವುದರಮೂಲಕ ಈ ದೇಶದ ಪ್ರಜೆಗಳಿಗೆ ಬಳ್ಳೀ ಮೇಲ್ಪಂಗ್ತಿಯನ್ನು ಹಾಕಿಕೊಟ್ಟರುವುದೂ ಮತ್ತು ವಿಶೇಷ ಉಭ್ರಾಯ ಸ್ಥಿತಿಯಲ್ಲಿ ರತಕ್ಕ ಪಾಶ್ಚಾತ್ಯ ದೇಶಗಳಲ್ಲಿ ಸಂಚಾರಮಾಡಿ ಅಮೋಘವಾದ ಅನುಭವವನ್ನೂ ತಿಳಿವಳಿಕೆಯನ್ನೂ ಪಡೆದು ಬಂದಿರುವುದೂ, ನಮಗಳಿಗೆ ವಿಶೇಷವಾದ ಆನಂದವನ್ನು ಉಂಟುಮಾಡತಕ್ಕ ಸಂಗತಿಗಳಾಗಿವೆ.

ಹೋದವರ್ಷದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೂ, ಕೈಗಾರಿಕೆಗಳ ಅಭಿವೃದ್ಧಿಗೂ, ವ್ಯವಸಾಯದ ಉನ್ನತಿಗೂ ಪ್ರೋತ್ಸಾಹನವನ್ನು ಕೊಟ್ಟರುತ್ತೀರೆಂದು ಕೇಳಿ ನಾವು ಸಂತೋಷಪಡುತ್ತೇವೆ. ಆಯಾ ಸ್ಥಳದ ಜನರೇ ಕೆಲವು ಬಾಬಿನ ಆಡಳಿತಗಳನ್ನು ನಡಿಸುವ ಲೋಕಲ್ ಸೆಲ್ಫ್ ಗವರ್ನಮೆಂಟಿನ ವಿಧಾನವನ್ನು ಜಾರಿಗೆ ತರಬೇಕೆಂಬ ವಿಷಯವು ತಮ್ಮ ಮನಸ್ಸಿನಲ್ಲಿ ವಿಶೇಷವಾಗಿ ನಾಟಿ ಇರುವುದಲ್ಲದೆ, ಕೆಲವು ಸಂದರ್ಭಗಳಲ್ಲಿ ಎಂದರೆ ಕೆಲವು ಡಿಸ್ಟ್ರಿಕ್ಟು ಮ್ಯುನಿಸಿಪಾಲಿಟಿಗಳಲ್ಲಿ ಸರ್ಕಾರಿ ಉದ್ಯೋಗಸ್ಥರಲ್ಲದ ಖಾಸಗೀ ಜನರನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಒಬ್ಬ ಸರ್ಕಾರೀ ಉದ್ಯೋಗಸ್ಥರಲ್ಲದವರನ್ನು ಅನರೆರಿ ಪ್ರೆಸಿಡೆಂಟರನ್ನಾಗಿಯೂ ನೇಮಿಸುವುದರ ಮೂಲಕ ತಾವು ತಮ್ಮ ಮನೋಗತವನ್ನು ಕಾರ್ಯತಃ ನಿದರ್ಶನ ಮಾಡಿಕೊಟ್ಟರುತ್ತೀರಿ.

ನಮ್ಮ ದೇಶದ ಜನರ ಸರ್ವೋತ್ಕೃಷ್ಟವಾದ ಪ್ರತ್ಯಾಶೆಗಳನ್ನೂ ಇಷ್ಟಾರ್ಥಗಳನ್ನೂ ನೆರವೇರಿಸಿಕೊಡುವುದಕ್ಕೋಸ್ಕರ ಭಗವಂತನು ತಮಗೆ ದೀರ್ಘಾಯುಷ್ಯವನ್ನೂ, ಆರೋಗ್ಯಭಾಗ್ಯವನ್ನೂ ಅಭ್ಯುದಯವನ್ನೂ ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ತಮ್ಮ ಅತ್ಯಂತ ವಿಧೇಯ ಸೇವಕರಾದ,
ಲಿಂಗಾಯುತ ಫಂಡು ಸಂಘದ ಮೆಂಬರುಗಳು.

V.

To

M. VISVESVARAYA, Esq., B.A., M.I.C.E., C.I.E.,

Dewan to His Highness the Maharaja of Mysore.

Respected Sir,

We, the Members of the Tumkur District, representing agricultural interests in the Representative Assembly, beg to be permitted to express the gratification of the public, on the success of your one year's administration, as the Dewan of this Model State.

The many reforms that have been introduced during the year—prominently, the creation of a floating capital through a State-aided Bank, a liberal Loan Regulation for purchasing machinery, and the establishments of a scientific Irrigation Department are all welcome undertakings for the material improvement of the country. Agriculture is our mainstay and organised efforts are necessary to demonstrate to the ignorant ryots the advantages of scientific agriculture.

In Ranibennur, close to Davangere, the Government of Bombay are introducing Steam Ploughing, from November next.

The Pumping Installation at Harihar, which has been giving good results has enrolled considerable interest.

By way of encouragement, the present agricultural associations should be supplied with Riding Cultivators and other improved agricultural machines.

Above all, an agricultural expert should be asked to take up a willing ryot's lands and demonstrate to the surrounding ryots, how to grow two blades of grass where formerly there grew only one.

We thank you for what you have done and for what you mean doing. As an enlightened countryman of ours, placed in an exalted position, with excellent opportunities to serve our beloved Maharaja, and our countrymen, we have reasons to expect more from you.

We rejoice over His Highness the Yuvaraja's intelligent sojourn in foreign lands, and beg to express our heart-felt pleasure on His Highness' safe return, after an extended tour.

We beg to remain,
Respected Sir,
Your most obedient servants,

The Representative Members of the Tumkur District.

V.

Translation of the above.

ತುಮಕೂರು ಡಿಸ್ಟ್ರಿಕ್ಟಿನ ಪ್ರತಿನಿಧಿ ಮೆಂಬರುಗಳು ಸಮರ್ಪಿಸಿದ
ಅಭಿನಂದನಾಶ್ರೇಷೆಯ ಭಾಷಾಂತರ.

ಮೈಸೂರು ಶ್ರೀಮನ್ಮಹಾರಾಜಾಸಾಹೇಬರ ಹಾದುರವರ ದಿವಾನರವರಾದ
ಶ್ರೀಮಾನ್ ಎಂ. ವಿಶ್ವೇಶ್ವರಯ್ಯನವರು ಬಿ.ಎ., ಎಂ.ಐ.ಸಿ.ಇ., ಸಿ.ಐ.ಇ., ಯುವರ ಸನ್ನಿಧಿಗೆ.

ಮಹಾಸ್ವಾಮಿ —

ಪ್ರಜಾಪ್ರತಿನಿಧಿಸಭೆಯಲ್ಲಿ ವ್ಯವಸಾಯಗಾರರ ಪರವಾಗಿ ತುಮಕೂರು ಡಿಸ್ಟ್ರಿಕ್ಟಿನ ಮೆಂಬರುಗಳಾದ ನಾವು, "ಮೊಡಲ್ ಸ್ಟೇಟಿ"ನೆಂಬ ಪ್ರಖ್ಯಾತವಾದ ಈ ಸೀಮೆಯು ದಿವಾನರಾಗಿ ಒಂದು ವರ್ಷದ ಆಡಳಿತ

ವನ್ನು ಬಹು ವಿಚಕ್ಷಣೆಯಿಂದ ತಾವು ನಡಿಸಿರುವುದಕ್ಕಾಗಿ ಪ್ರಜೆಗಳಿಗುಂಟಾಗಿರುವ ಸಂತೋಷಾತಿಶಯವನ್ನು ಸೂಚಿಸಲು ಅಪ್ಪಣೆ ಬೇಡುತ್ತೇವೆ.

ಈ ವರ್ಷದಲ್ಲಿ ಜಾರಿಗೆ ತರಲ್ಪಟ್ಟ ಅನೇಕ ಏರ್ಪಾಡುಗಳು, ಮುಖ್ಯವಾಗಿ, ಸರ್ಕಾರದ ಸಹಾಯವನ್ನು ಪಡೆದ ಬ್ಯಾಂಕಿನ ಮೂಲಕ ಚಲಾವಣೆಗೆ ಮೂಲಧನವನ್ನು ಕಲ್ಪಿಸಿಕೊಟ್ಟಿರುವುದು, ಯಂತ್ರಗಳನ್ನು ಕೊಂಡು ಕೊಳ್ಳುವುದಕ್ಕೆ ಧಾರಾಳವಾಗಿ ಸಾಲ ಕೊಡುವ ಕಾನೂನನ್ನು ಮಾಡಿರುವುದು, ಜಮೀನ್ದಾರಿ ಸಾಗುವಳಿಗೆ ಶಾಸ್ತ್ರೀಯ ರೀತಿಯಲ್ಲಿ ನೀರು ಸರಬರಾಯಿಮಾಡುವ ಇಲಾಖೆಯನ್ನು ಏರ್ಪಡಿಸಿರುವುದು, ಇವುಗಳೆಲ್ಲಾ ಸಂಸ್ಥಾನದ ಸಂಪದಭಿವೃದ್ಧಿಗೆ ಸಾಧಕಗಳಾಗಿಯೂ ಸಮಸ್ತರಿಗೂ ಅಭಿಮತಗಳಾಗಿಯೂ ಇರುವ ಕಾರ್ಯಗಳಾಗಿರುತ್ತವೆ. ವ್ಯವಸಾಯವೇ ನಮ್ಮ ಜೀವನಕ್ಕೆ ಮುಖ್ಯಾಧಾರವಾದ್ದು. ಶಾಸ್ತ್ರೀಯರೀತಿಯಲ್ಲಿ ವ್ಯವಸಾಯವನ್ನು ಮಾಡುವುದರಿಂದುಂಟಾಗುವ ಪ್ರಯೋಜನವನ್ನು ವಿಶೇಷಜ್ಞರಲ್ಲದ ರೈತರಿಗೆ ನಿದರ್ಶನ ಪೂರ್ವಕವಾಗಿ ತೋರಿಸಿ ಕೊಡುವುದಕ್ಕಾಗಿ ಕ್ರಮವಾದ ಪ್ರಯತ್ನಗಳನ್ನು ಮಾಡುವುದು ಆವಶ್ಯಕವಾಗಿರುತ್ತದೆ.

ದಾವಣಗೆರೆಗೆ ಸಮೀಪದಲ್ಲಿರುವ ರಾಣಿಬನ್ನೂರಿನಲ್ಲಿ ಬೊಂಬಾಯಿ ಸರ್ಕಾರದವರು ಹಬೆಯ ಬಲದಿಂದ ಭೂಮಿಯನ್ನು ಉಳುವ ಕ್ರಮವನ್ನು ನವೆಂಬರ್ ಮೊಹಿಯಿಂದ ಜಾರಿಗೆ ತರುತ್ತಾರೆ.

ಹರಿಹರದಲ್ಲಿ ಸ್ಥಾಪಿಸಿರುವ ನೀರನ್ನು ಎತ್ತುವ ಯಂತ್ರದಿಂದ ತುಂಬಾ ಪ್ರಯೋಜನವುಂಟಾಗುತ್ತಾ ಇರುವುದರಿಂದ ಅನೇಕರಿಗೆ ಆ ಯಂತ್ರದ ವಿಷಯದಲ್ಲಿ ತುಂಬಾ ಕುತೂಹಲವುಂಟಾಗಿರುತ್ತದೆ.

ಈಗ ಇರುವ ವ್ಯವಸಾಯ ಸಂಘಗಳಿಗೆ "ರೈಡಿಂಗ್ ಕಲ್ಟಿವೇಟರುಗಳನ್ನೂ" ಇತರ ನವೀನ ವ್ಯವಸಾಯ ಯಂತ್ರಗಳನ್ನೂ ಪ್ರೋತ್ಸಾಹರೂಪವಾಗಿ ಕೊಡಬೇಕು.

ಇವೆಲ್ಲಕ್ಕಿಂತಲೂ ಮುಖ್ಯವಾಗಿ ಮಾಡಬೇಕಾದುದೇನೆಂದರೆ --ವ್ಯವಸಾಯ ಕಾರ್ಯಗಳಲ್ಲಿ ನಿಪುಣರಾದವರು ಜಮೀನುಗಳನ್ನು ಬಿಟ್ಟುಕೊಡುವುದಕ್ಕೆ ಇಷ್ಟಪಡುವ ರೈತರಿಂದ ಜಮೀನುಗಳನ್ನು ತೆಗೆದುಕೊಂಡು, ಅದರಲ್ಲಿ ಬಂದಕ್ಕೆರಡಾಗಿ ಬೆಳೆ ತೆಗೆಯುವ ವಿಧಾನವನ್ನು ಆಜುಬಾಜು ರೈತರಿಗೆ ನಿದರ್ಶನ ಪೂರ್ವಕ ತಿಳಿಸಬೇಕೆಂದು ಅವರಿಗೆ ಹೇಳಬೇಕು.

ತಾವು ಈಗ ಮಾಡಿರುವ ಮತ್ತು ಇನ್ನು ಮುಂದೆ ಮಾಡಬೇಕೆಂದಿರುವ ಪ್ರಜಾಹಿತಕರಗಳಾದ ಕಾರ್ಯಗಳಿಗಾಗಿ ತಮಗೆ ವಂದಿಸುತ್ತೇವೆ. ತಾವು ನಮ್ಮ ದೇಶೀಯರಲ್ಲಿ ವಿಶೇಷ ಪ್ರಜ್ಞಾಶಾಲಿಗಳಾಗಿ ಸರ್ವೋತ್ಕೃಷ್ಟವಾದ ಪದವಿಗೆ ದಯೆಮಾಡಿಸಿರುವಿರಲ್ಲದೆ, ಶ್ರೀಮನ್ಮಹಾರಾಜರವರಿಗೆ ಮಂತ್ರಿಗಳಾಗಿ ಇದ್ದುಕೊಂಡು ನಮ್ಮ ದೇಶೀಯರಿಗೆ ಹಿತವನ್ನು ಕಲ್ಪಿಸಲು ಸರ್ವೋತ್ತಮವಾದ ಅವಕಾಶವು ತಮಗೆ ದೊರೆತಿರುವುದರಿಂದ, ಇತೋಭ್ಯಧಿಕವಾದ ಮಹಾಕಾರ್ಯಗಳನ್ನು ತಾವು ನೆರವೇರಿಸುವಿರೆಂದು ನಾವು ದೃಢವಾಗಿ ನಂಬಿರುತ್ತೇವೆ.

ನಮ್ಮ ಶ್ರೀಮದ್ಯುವರಾಜರವರು ಬುದ್ಧಿಚಾತುರ್ಯದಿಂದ ವಿದೇಶ ಸಂಚಾರ ಮಾಡಿದುದನ್ನು ನೋಡಿ ನಮಗೆ ತುಂಬಾ ಸಂತೋಷ ಉಂಟಾಗಿರುತ್ತದೆ. ಅವರು ಬಹುಕಾಲ ಅನೇಕ ದೇಶಗಳಲ್ಲಿ ಸಂಚಾರಮಾಡಿ ಸುರಕ್ಷಿತರಾಗಿ ರಾಜಧಾನಿಗೆ ವಾಪಸ್ಸು ಬರುವಂತೆ ಮಾಡಿಸಿರುವುದನ್ನು ಕಂಡು ನಮಗೆ ಉಂಟಾಗಿರುವ ವಾಸ್ತವಿಕವಾದ ಆನಂದವನ್ನು ವಿನಯ ಪೂರ್ವಕವಾಗಿ ಅರಿಕೆ ಮಾಡಿರುತ್ತೇವೆ, ಮಹಾಸ್ವಾಮಿ.

ತುಮಕೂರು ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿ ಮೆಂಬರುಗಳು.

VI.

ಶ್ರೀಃ

ಮೈಸೂರು ಸಂಸ್ಥಾನದ ಮುಖ್ಯಾಮಾತ್ಯರಾದ ಶ್ರೀಮಂತ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು,
ಬಿ. ಎ., ಸಿ. ಐ. ಇ. ಯವರ ಸನ್ನಿಧಾನದಲ್ಲಿ.

ನಾಗಮಂಗಲದ ತಾಲ್ಲೂಕಿನ ಪ್ರಜಾಪ್ರತಿನಿಧಿ ಮೆಂಬರುಗಳು ಭಕ್ತ್ಯಾಪುರಸ್ಸರವಾಗಿ
ಮಾಡುವ ವಿಜ್ಞಾಪನೆಗಳು; ಸ್ವಾಧೀನ.

ನಮ್ಮ ದೇಶೀಯರಾದ ತಾವು ನಮ್ಮ ಸಂಸ್ಥಾನದ ಅಮಾತ್ಯ ಪದವಿಯನ್ನು ಪಡೆದಂದಿನಿಂದ, ದೇಶೋದ್ಧಾರಕಗಳಾದ ವಿದ್ಯಾಭ್ಯಾಸ, ವ್ಯಾಪಾರ, ಕೈಗಾರಿಕೆ, ನೀರಾವರಿ, ಮೊದಲಾದ ಕಾರ್ಯಗಳಿಗೆಲ್ಲ ವಿಶೇಷವಾದ ಪ್ರೋ

ತ್ಸಾಹ ಉಂಟಾಗಿ ಸಂಸ್ಥಾನವು ಅಭಿವೃದ್ಧಿಯನ್ನು ಹೊಂದಿ ಪ್ರಜಾ ಸಮುದಾಯವೆಲ್ಲ ಆತ್ಮಾವಲಂಬಿಗಳಾಗಿರಲು, ತಕ್ಕ ಸಹಾಯಗಳನ್ನು ಮಾಡಿಸಿರುವುದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ.

ಫೆನವನ್ನು ಜೊಂದಿವ ಶ್ರಿಮದ್ಯುವರಾಜರಾದ ಕಂಠೀರವ ನೃಸಿಂಹರಾಜ ಒಡೆಯರ್ ಬಹದ್ದೂರ್, ಕೆ. ಸಿ. ಐ. ಇ. ಯವರು ಪಾಶ್ಚಾತ್ಯ ರಾಜ್ಯಗಳಲ್ಲಿ ಸಂಚಾರ ಮಾಡಿ ಆಯಾಯ ಸ್ಥಳಗಳಲ್ಲಿ ಫನತರವಾದ ಮರ್ಯಾದೆಗಳನ್ನು ಪಡೆದು, ಅಲ್ಲಲ್ಲಿನ ಕಲಾ ಕೌಶಲ್ಯಾದಿಗಳನ್ನು ಪರಾಮರಿಸಿ, ಸುರಕ್ಷಿತರಾಗಿ ದಯಮಾಡಿಸಿರುವುದು ಈ ಸಂಸ್ಥಾನವ ಪ್ರಜೆಗಳ ಪುಣ್ಯೋದಯವೆಂತ ನಿಸ್ಸಂದೇಹವಾಗಿ ವಿಜ್ಞಾಪಿಸುತ್ತೇವೆ, ಸ್ವಾಮಿ.

ಸಾರ್ವಭೌಮ ಪ್ರತಿನಿಧಿಗಳಾದ ಲಾರ್ಡ್ ಪಾರ್ಟಿಂಗ್ ಪ್ರಭುಗಳವರು ಪರಿವಾರ ಸಮೇತರಾಗಿ ನಮ್ಮ ಸಂಸ್ಥಾನಕ್ಕೆ ದಯಮಾಡಿಸುವ ವೇಳೆಗೆ ಈ ಸಂಸ್ಥಾನದಲ್ಲಿ ಮಳೆ ಬೆಳೆಗಳಾಗಿ ಶುಭ ಪರಂಪರಾಸೂಚನೆಗಳು ಉಂಟಾಗಿರುವುದು ಆ ಮಹಾಶಯರ ಆಗಮನದ ಪ್ರತಿಫಲವಾಗಿ ಪರಿಣಮಿಸಿದೆ ಎಂಬದಾಗಿ ಸಂತೋಷಚಿತ್ತರಾಗಿ ಅರಿಕೆ ಮಾಡುತ್ತೇವೆ, ಸ್ವಾಮಿ.

ಈ ನಾಗಮಂಗಲದ ತಾಲ್ಲೂಕಿನಲ್ಲಿ 365 ಗ್ರಾಮಗಳಿರುತ್ತವೆ. ಇಲ್ಲಿಯ ಪ್ರಜೆಗಳ ದುರದೃಷ್ಟದಿಂದ ಕಾಲಕಾಲಕ್ಕೆ ಮಳೆ ಬೆಳೆಗಳು ಆಗದೆ ಪ್ರಜೆಗಳು ದಿನೇ ದಿನೇ ಬಹಳ ಹೀನಸ್ಥಿತಿಗೆ ಬರುತ್ತಿದ್ದಾರೆ.

ಹೊಟ್ಟೆಗೇನೆ ಕುಗ್ರಾಮವಾಗಿ ಈ ತಾಲ್ಲೂಕಿನಿಂದ, ಕಾಫಿತೋಟದ ಪ್ರಾಂತ್ಯ ಬಹುಜನರು ಜೆಂಗಸರು ಮಕ್ಕಳೊಂದಿಗೆ ಹೋಗುವದು, ಅಲ್ಲಿ ಕೂಲಿಮಾಡಿ, ಬಂದ ಹಣವಲ್ಲಿ ಕಾಲುಹೊಟ್ಟೆ ಗ್ರಾಸ ತಿಂದು, ಉಳಿದ ಹಣವನ್ನು ಮೂಟುಪಿನಂತೆ ಊರಿಗೆ ತಂದು, ವರ್ಷ ವರ್ಷ ಸರ್ಕಾರದ ಕಂದಾಯವನ್ನು ಕೊಟ್ಟು ಜಮೀನನ್ನು ಉಳಿಸಿಕೊಳ್ಳುತ್ತಿರುತ್ತಾರೆ.

ಈ ದೆಸೆಯಿಂದ ಜನಗಳಿಗೆ, ಆ ಕಾಫಿತೋಟದ ಪ್ರಾಂತ್ಯದ ಹವಾ ಅಂಟಿದೆ ಅನೇಕರು ಅಲ್ಲೇ ಪ್ರಾಣ ಬಿಡುವುದು, ಉಳಿದವರು ರೋಗಸಹಿತರಾಗಿ ಊರಿಗೆ ಬಂದು ತಿನ್ನುವುದಕ್ಕೂ ಇಲ್ಲದೆ ನರಳುವುದು, ಈ ರೀತಿ ತೊಂದರೆ ಅನುಭವಿಸುತ್ತಿರುವ ಜನಗಳ ಸ್ಥಿತಿಯು ಬಹಳ ಪರಿತಾಪವನ್ನುಂಟುಮಾಡುತ್ತದೆ.

ಈ ತಾಲ್ಲೂಕಿನ ತಲಾವುಗಳ ಕೆಳಗೆ 3-4 ವರ್ಷಕ್ಕೆ ಬಂದಾವರ್ತಿ ಮೊತ್ತ ಅರ್ಧ ಅಥವಾ ಮುಕ್ಕಾಲು ಬೆಳೆ ಆಗುತ್ತದೆ. ಆದುದರಿಂದ ಈ ವಿದ್ಯಮಾನಗಳು ಸನ್ನಿಧಾನದ ಆಲೋಚನೆಗೆ ಬರಬೇಕೆಂತಲೂ, ನಾಗಮಂಗಲದ ತಾಲ್ಲೂಕಿನ ಸರಹದ್ದಿಗೆ ಹೇಮಾವತೀ ನದಿಯ ಶ್ರೀರಾಮ ದೇವರ ಕಟ್ಟೆಯ ಉತ್ತರ ನಾಲೆಯು ಚನ್ನರಾಯಪಟ್ಟಣದ ತಾಲ್ಲೂಕಿಗೆ ಬಂದಿರುವುದು ಸುಮಾರು 7-8 ಮೈಲಿ ಫಲಸಲೆಯಲ್ಲಿರುವುದರಿಂದ ಈ ನಾಲೆಯ ಪೈಕಿ, ಈ ನಾಗಮಂಗಲದ ತಾಲ್ಲೂಕಿಗೆ ಬಂದು ಬ್ರಾಂಚ್ ನಾಲೆಯನ್ನು ಕೊಡಿಸುವಂತೆ ಅಪ್ಪಣೆ ಕೊಡಿಸಿದ್ದಾದರೆ ಇದರಿಂದ ಅನೇಕರು ಕಾಫಿ ತೋಟದ ಪ್ರಯಾಣವನ್ನು ನಿಲ್ಲಿಸಬಹುದಾಗಿರುವುದರಿಂದ ಜೀವನಕ್ಕೆ ಅನುಕೂಲವಾಗುತ್ತದೆ.

ಬಂಧುವೇಳ ಮುಂದೆ ಕನ್ನಂಬಾಡಿ ಪ್ರಾಜಕ್ಟು ಈ ತಾಲ್ಲೂಕಿಗೆ ಬರುವ ಸಂದರ್ಭದಲ್ಲಿ ಆಗ್ಗೆ ಇನ್ನೂ ಹೆಚ್ಚಾಗಿ ಅನುಕೂಲ ಉಂಟಾಗಿ ಈ ತಾಲ್ಲೂಕಿನ ಪ್ರಜೆಗಳು ಕಾಫಿತೋಟದ ತೊಂದರೆಯಿಂದಲೂ, ಇತರ ಜೀವನೋಪಾಯದ ತೊಂದರೆಯಿಂದಲೂ ಬಿಡಗಡೆ ಆಗತಕ್ಕವರಾಗಬಹುದು ಸ್ವಾಮಿ.

ಪರೋಪಕಾರಾಯ ದುಹಂತಿ ಧೇನವಃ । ಜಗೋಪ ಗೋರೂಪಧರಾಮಿ ವೋರ್ವೀಂ॥

ಇದೇ ಮುಂತಾದ ವೇಚನಗಳಿಂದ ಕೇವಲ ಪರೋಪಕಾರಾರ್ಥವಾದ ಗೋವಿನಂತಿರುವ ಭೂದೇವಿಗೆ ರಕ್ಷಕರಾದ ರಾಜರು ಭೂಮಿಗೆ ಸಮಾನವಾದ ಗೋವುಗಳನ್ನು ಅತ್ಯಾದರದಿಂದ ರಕ್ಷಿಸಬೇಕೆಂಬ ವಿಷಯವು ಶಾಸ್ತ್ರಪ್ರಸಿದ್ಧವಾಗಿಯೇ ಇರೋಣವರಿಂದಲೂ, ಗೋವುಗಳಿಂದ ಪ್ರಪಂಚಕ್ಕೆ ಉಂಟಾಗುತ್ತಿರುವ, ಸುಖ ಪರಂಪರೆಗಳನ್ನು ಸ್ವಾಮಿಯವರ ಸನ್ನಿಧಿಯಲ್ಲಿ ಅರಿಕೆ ಮಾಡಬೇಕಾಗಿಲ್ಲ. ಹೀಗಿರುವಾಗ ಸಂಸ್ಥಾನದ ಅನೇಕ ಭಾಗಗಳಲ್ಲಿ ಪ್ರತ್ಯೇಕ ಪರೀಕ್ಷವಾಗಿ ಗೋವೃದ್ಧಿಯನ್ನು ಮಾಡುತ್ತಿರುವ ವಿಚಾರ, ಸರ್ಕಾರದವರಲ್ಲಿ ಹಿಂದೆ ಅನೇಕವೇಳೆ ವಿಜ್ಞಾಪಿಸಿಕೊಂಡಿರುವೆವಲ್ಲ ಫಲಕಾರಿಯಾಗದೆ ಇರುವುದಕ್ಕೋಸುಗ ಅತ್ಯಂತ ವಿಷಾದಪಡುತ್ತೇವೆ. ಅನೇಕ ಇತರ ಸಂಸ್ಥಾನಗಳಲ್ಲಿ ಗೋವೃದ್ಧಿಗಳನ್ನು ನಿಲ್ಲಿಸಿರುತ್ತಾರೆ. ಹಾಗೆಯೇ ಇಲ್ಲಿಯೂ ಆ ಕಾಮಧೇನುವಿನ ಮಹಾ ವೈಸರ್ಗಿಕಧರ್ಮವನ್ನು ನಿಲ್ಲಿಸಿ ಶಾಶ್ವತವಾದ ಕೀರ್ತಿಯನ್ನು ಪಡೆಯಬೇಕೆಂದೂ ಈ ನಮ್ಮ ವಿಜ್ಞಾಪನೆಗಳನ್ನೆಲ್ಲಾ ಸಾವಧಾನದಿಂದ ಲಾಲಿಸಿ ಕೂಡಲೇ ಫಲಕಾರಿಯಾಗುವಂತೆ ಅಪ್ಪಣೆ ದಯೆ ಪಾಲಿಸಬೇಕೆಂದೂ ಪ್ರಾರ್ಥಿಸುತ್ತೇವೆ, ಸ್ವಾಮಿ.

ನಮ್ಮನ್ನಾಳುವ ಶ್ರೀಮನ್ ಮಹಾರಾಜ, ಶ್ರೀ ಕೃಷ್ಣ ರಾಜೇಂದ್ರ ಬಹದ್ದೂರ್, ಜಿ. ಸಿ. ಎಸ್. ಐ. ರವರಿಗೂ ಅವರ ಅನುಜವರ್ಯರಾದ ಶ್ರೀಕಂಠೀರವ ನೃಸಿಂಹರಾಜ ಬಹದ್ದೂರ್, ಕೆ. ಸಿ. ಐ. ಇ. ರವರಿಗೂ ರಾಜಬಂಧುವರ್ಗದವರಿಗೂ ತಮಗೂ, ಜಗದೀಶನು ಇತೋಽಭ್ಯತಿಶಯವಾದ ಸುಖಪರಂಪರೆಗಳನ್ನು ಅನವರತವೂ ಅನುಗ್ರಹಿಸಬೇಕೆಂದು ಅಂಜಲಿಬದ್ಧರಾಗಿ ಪ್ರಾರ್ಥಿಸುತ್ತೇವೆ, ಸ್ವಾಮಿ.

ಇಂತಿ ಅತ್ಯಂತ ವಿಧೇಯರಾದ,
ಗಂಗಾಧರಕಟ್ಟರ ಗಂಗಪ್ಪ,
ಚಂದ್ರಶೇಖರಯ್ಯ,
ವೆಂಕಟರಮಣಯ್ಯ,
ನಾಗಸುಂಗಲದ ತಾಲ್ಲೂಕಿನ ಪ್ರಜಾಪ್ರತಿನಿಧಿಗಳು.

VII.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರ ದಿವಾನರವರೂ ಮತ್ತು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷರೂ ಆದ ಮಿಸ್ಟರ್ ಎಂ. ವಿಶ್ವೇಶ್ವರಯ್ಯ, ಬಿ. ಎ., ಸಿ. ಐ. ಇ, ಯವರ ಸನ್ನಿಧಿಯಲ್ಲಿ.

ಮಹಾಸ್ವಾಮಿ,

ನಮ್ಮ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿನಿಧಿಸಭೆಯ ಕಾರ್ಯಗಳು ಲಲಿತವಾಗಿ ನೆರವೇರಲು ಪ್ರೋತ್ಸಾಹವನ್ನು ದಯಪಾಲಿಸುತಲಿರುವುದಕ್ಕೂ, ಈ ಮಹಾಸಭೆಗೆ ತಮ್ಮಪರ ಪ್ರತಿನಿಧಿಗಳನ್ನು ಚುನಾಯಿಸಿ, ಇಲ್ಲಿಗೆ ಕಳುಹಿಸುವ ಸ್ವಾತಂತ್ರ್ಯವನ್ನು ದೇಶಿಯ ಪ್ರಜೆಗಳಿಗೂ, ಪ್ರಜೋಪಕಾರ ಸಭೆಗಳಿಗೂ, ಕೊಡುತಲಿರುವುದಕ್ಕೂ ನಾವುಗಳು ಕೃತಜ್ಞರಾಗಿದ್ದೇವೆ.

ಈ ಸಂಸ್ಥಾನದ ಚೀಫ್ ಇಂಜನೀಯರಾಗಿದ್ದ ತಮಗೆ ಶ್ರೀಮನ್ಮಹಾರಾಜರವರು ಈ ಸಂಸ್ಥಾನದ ದಿವಾನ ಪದವಿಯನ್ನು ಅನುಗ್ರಹಿಸುವಷ್ಟು ಕೃಪಾಶಾಲಿಗಳಾದ್ದಕ್ಕಾಗಿ ನಾವುಗಳು ಸಂತೋಷಪಡುತ್ತಾ ಕೃತಜ್ಞರಾಗಿದ್ದೇವೆ.

ಕ್ಷಮಾ ದಾತಾ ಗುಣಗ್ರಾಹೀ ಸ್ವಾಮಿತಾ ಪುಣ್ಯೈನ ಲಭ್ಯತೆ |
ಕುಚೇರ ಕ್ಷೋನು ರಕ್ತೋಚ್ಚ ಮಂತ್ರೀ ಕಾಲೇನ ಲಭ್ಯತೆ ||

ಎಂಬ ಶ್ಲೋಕದ ಉತ್ತರಾರ್ಧವು ಪ್ರಕೃತ ಈ ದೇಶದಲ್ಲಿ ಫಲಿಸಿದಂತಾಯಿತು.

ವಸ್ತುತಃ ತಾವು ಈ ದೇಶದ ಪ್ರಜೆಗಳಾಗಿಯೇ ಇರುತ್ತೀರಿ. ಕಾರ್ಯತಃ ಮೈಸೂರು ಭೂಮಾತೆಯ ಪ್ರಖ್ಯಾತ ಪುತ್ರರೆನಿಸಿರುವಿರಿ. ಸಾರ್ವಭೌಮ ಸರ್ಕಾರದಲ್ಲೂ, ಪ್ರಖ್ಯಾತವಾದ ನೇಟಿವ್ ರಾಜ್ಯಗಳಲ್ಲೂ, ತಾವು ಶ್ರೇಷ್ಠವಾದ ಅಧಿಕಾರಗಳಲ್ಲಿದ್ದು, ಪಡೆದಿರುವ ಕೀರ್ತಿಯು ಅದ್ವಿತೀಯವಾಗಿರುತ್ತದೆ.

ತಾವು ಈ ಸಂಸ್ಥಾನದ ಸಂಪತ್ತನ್ನು ಸರ್ವತೋಮುಖವಾಗಿ ವೃದ್ಧಿಗೆ ತರುತ್ತಲಿರುವ ವಿಷಯದಲ್ಲಿಯೂ, ಪ್ರಜೆಗಳಿಗೆ ಸ್ವಾತಂತ್ರ್ಯವನ್ನೂ ಸೌಖ್ಯವನ್ನೂ ಹೆಚ್ಚಿಸಿ, ಆತ್ಮಾವಲಂಬಿಗಳನ್ನಾಗಿ ಮಾಡುವ ಉದ್ದೇಶದೊಡನೆ ಈ ಸಂಸ್ಥಾನದ ಪುರೋಭಿವೃದ್ಧಿಗೆ ದ್ರವ್ಯೋತ್ಪತ್ತಿ ಸಾಧನೆಗಳನ್ನು ಕಂಡುಹಿಡಿಯುತ್ತಲೂ, ಅಂಥ ವಿಷಯಗಳನ್ನು ಕೇವಲ ಆಲೋಚನೆಗಳಲ್ಲಿಯೂ, ಜಿಜ್ಞಾಸೆಗಳಲ್ಲಿಯೂ ಚರ್ಚಾತಾರ್ಥಮಾಡದೆ ಕಾರ್ಯ ಪ್ರಾರಂಭಗಳನ್ನೇ ಮಾಡುತಲಿರುವುದಕ್ಕಾಗಿ ನಾವುಗಳು ತಮ್ಮನ್ನು ವಂದಿಸುತ್ತೇವೆ.

ರಾಜ್ಯಾಡಳಿತವಲ್ಲಿ ಬಳಿತವಾಗಿರುವ ಕೆಲವು ಪೌರಕಾರ್ಯಗಳನ್ನು ದಕ್ಷರಾದ ಸ್ಥಿರಪ್ರಮುಖರಲ್ಲಿ ವಹಿಸುತ್ತಲಿರುವುದಕ್ಕೆ ನಾವು ತಮ್ಮನ್ನು ವಂದಿಸುತ್ತೇವೆ.

ಮೈಸೂರು ದೇಶದಲ್ಲಿ ಮೇಲ್ಕೋಟೆಯು ಪ್ರಸಿದ್ಧವಾದ ಯಾತ್ರಾ ಸ್ಥಳವು. ಇಲ್ಲಿ ಬಂದು ಆಸ್ಪತ್ರೆಯನ್ನು ಏರ್ಪಡಿಸಿ ಕೊಡಬೇಕೆಂಬ ನಮ್ಮ ಚಿರಕಾಲ ಪ್ರಾರ್ಥನೆಯನ್ನು ತಾವು ಈ ಪದವಿಗೆ ದಯಮಾಡಿಸಿದೊಡನೆಯೇ ನೆರವೇರಿಸಿಕೊಟ್ಟದ್ದಕ್ಕಾಗಿ ನಾವುಗಳು ಬಹಳವಾಗಿ ಕೃತಜ್ಞರಾಗಿದ್ದೇವೆ.

ಈ ಸಂಸ್ಥಾನದ ಪ್ರಜೆಗಳಿಗೂ, ಘನವಾದ ನಮ್ಮ ಸರ್ಕಾರಕ್ಕೂ ಉಂಟಾಗಿರಬೇಕಾದ ಅನ್ಯೋನ್ಯಭಾವಕ್ಕೆ ಈ ಅಸೆಂಬ್ಲಿಯು ಮುಖ್ಯಸಾಧನವಾಗಿರುವುದು. ಇದರ ಅಧ್ಯಕ್ಷತೆಯು ಈ ಸಂಸ್ಥಾನದ ಅಮಾತ್ಯ ಪದವಿಗೆ ಸ್ವಭಾವ ಸಿದ್ಧವಾಗಿದ್ದಾಗಿದೆ. ಇದರ ಇತೋಭ್ಯತಿಶಯವಾದ ಪುರೋಭಿವೃದ್ಧಿಯಲ್ಲಿಯೂ, ಸಮಯೋಚಿತ ಪರಿಷ್ಕರಣದಲ್ಲಿಯೂ ತಾವು ಚಿತ್ತವಿಡಬೇಕಾಗಿ ಬೇಡಿಕೊಳ್ಳುತ್ತೇವೆ.

ನಮ್ಮ ಸಂಸ್ಥಾನದ ಶ್ರೀಮದ್ಯುವರಾಜರವರು, ತಮ್ಮ ಯೂರೋಪ್ ಪ್ರಾಂತ್ಯದ ಸಂಚಾರವನ್ನು ನೆರವೇರಿಸಿಕೊಂಡು ಸೌಖ್ಯದಿಂದ ರಾಜಧಾನಿಗೆ ಚಿತ್ತೈಸಿರುವುದಕ್ಕೂ, ಅವರು ಸಂಚಾರ ಮಾಡಿದ ರಾಜ್ಯಗಳಲ್ಲೆಲ್ಲಾ ತಮ್ಮ ಪದವಿಗೆ ತಕ್ಕಹಾಗೆ ಶ್ರೀಮತ್ ಚಕ್ರವರ್ತಿಯವರಿಂದಲೂ, ಆಯಾಯ್ಕ ಜನಾಂಗದ ಮಹಾಜನಗಳಿಂದಲೂ ಸನ್ಮಾನಿತರಾಗಿ ರಾಜಧಾನಿಗೆ ದಯಮಾಡಿಸಿರುವುದಕ್ಕೂ ನಮ್ಮ ಸಭೆಯವರು ಸಂತೋಷಿಸಿ ತಮ್ಮ ಶುಭವಾದನಗಳನ್ನು ಶ್ರೀಮ್ ಯುವರಾಜರವರ ಸನ್ನಿಧಿಯಲ್ಲಿ ಅರಿಕೆಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ನಮ್ಮ ಸಂಸ್ಥಾನದ ಈ ವರ್ಷದ ಇತಿಹಾಸದಲ್ಲಿ ಘನವನ್ನೈದಿದ ನಮ್ಮ ವೈಸರಾಯಿರವರ ಆಗಮನವು ಅತಿಶಯವಾದದ್ದಾಗಿರುವುದು. ಇವರ ಆಗಮನವು ನಮ್ಮ ದೇಶದ ಅಭ್ಯುದಯಕ್ಕೂ, ಸಾರ್ವಭೌಮಸರ್ಕಾರದೊಡನೆ ನಮ್ಮ ಮೈಸೂರು ಸರ್ಕಾರದ ಸ್ನೇಹಾಭಿವೃದ್ಧಿಗೂ ಕಾರಣವಾಗಲೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಸಂಸ್ಥಾನದ ಅಭ್ಯುದಯಕ್ಕಾಗಿ ತಾವು ಅನೇಕ ಮಹತ್ಕಾರ್ಯಗಳನ್ನು ಆರಂಭಿಸಿರುತ್ತೀರಿ. ಇವುಗಳೆಲ್ಲವೂ ನಿರ್ವಿಘ್ನತೆಯಿಂದ ತಮ್ಮ ಅಭಿಪ್ರಾಯದಂತೆ ಶುಭಪರಿಣಾಮವನ್ನು ಹೊಂದಿ ತಮ್ಮನ್ನು ಉನ್ನತಪದವಿಗೆ ತಕ್ಕಹಾಗೆ ತಮಗೆ ಭಗವಂತನು ಆಯುರಾರೋಗ್ಯವನ್ನು ಕೊಟ್ಟು, ಚಿರಕಾಲ ಈ ಪದವಿಯಲ್ಲಿಯೇ ತಾವು ನೆಲೆಗೊಂಡು ಯಾವಾಗ್ಯೂ ತಮ್ಮವರಾಗಿರುವ ನಮ್ಮೆಗಳನ್ನು ಕಾಪಾಡುತ್ತಾ ಬರಬೇಕೆಂದು ಪ್ರಾರ್ಥಿಸುವ,

ತಮ್ಮ ಅತ್ಯಂತ ವಿಧೇಯ,
ಹೆಚ್. ಕೃಷ್ಣಶಾಸ್ತ್ರಿ,
ರೆಪ್ರಜಂಟೇಟಿವ್ ಮೆಂಬರ್
ಸದಾನಂದವರ್ಧಿನೀ ಸಭಾ, ಮೇಲುಕೋಟೆ.

VIII.

ಮೈಸೂರು ಸಂಸ್ಥಾನದ ದಿವಾನರವರಾದ ಎಮ್. ವಿಶ್ವೇಶ್ವರಯ್ಯ, ಎಸ್ಕ್ವೈರ್, ಬಿ. ಎ,
ಎಫ್. ಸಿ. ಇ., ಎಲ್. ಸಿ. ಇ., ಎಮ್. ಐ. ಸಿ. ಇ., ಎಫ್. ಬಿ. ಯು., ಸಿ. ಐ. ಇ.,
ಯವರ ದಿವ್ಯ ಸನ್ನಿಧಾನದಲ್ಲಿ.

ಮಹಾಸ್ವಾಮಿಯವರು, ಮೈಸೂರು ರಾಜ್ಯದ ಪೂರ್ವಭಾಗದಲ್ಲಿ ನೆಲೆಗೊಂಡು ಇಂಡಿಯಾ ರಾಜ್ಯದ ಇಂಗ್ಲೀಷು ಪ್ರಭುಗಳ ಮನಸೋಲ್ಲಾಸವಾಗಿ, ನಿಸ್ಪೃಹತೆಯಿಂದ ರಾಜ್ಯಕಾರ್ಯ ಪ್ರವೀಣರಾಗಿ ಅದ್ಭುತವಾದ ಕೀರ್ತಿ ಸಂಪಾದಿಸಿರುವದು ದೇಶಪ್ರಸಿದ್ಧವಾಗಿರುತ್ತೆ.

ನಮ್ಮನ್ನಾಳುತ್ತಿರುವ ಅತ್ಯಂತ ಘನವನ್ನೈದಿದ, ಶ್ರೀಮದ್ರಾಜಾಧಿರಾಜ ಶ್ರೀಕೃಷ್ಣ ರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಯವರು, ತಮ್ಮ ಬುದ್ಧಿ, ಶಕ್ತಿ, ಸಾಹಸ, ಪರಾಕ್ರಮ ಮೊದಲಾದ ಕಲ್ಯಾಣಗುಣಗಳಿಂದ ಇಂಗ್ಲಿಷ್ ಪ್ರಭುಗಳ ಪ್ರೀತಿಗೆ ಪಾತ್ರರಾಗಿ, ಆ ಪ್ರಭುಗಳ ಉದ್ದೇಶಾನುಸಾರ, ತಮ್ಮ ರಾಜ್ಯಮೆಂಬ್ರಾಲೋಚನಸಭಾ ಅಗ್ರಾಸನಾಧಿಪತ್ಯವನ್ನಲಂಕರಿಸುವಂತೆ ಅಪ್ಪಣೆ ದಯಪಾಲಿಸಿರುವುದು ಇಂಡಿಯಾ ರಾಜ್ಯವೆಲ್ಲಾ ಪ್ರಸಿದ್ಧವಾಗಿದೆ.

ಸ್ವದೇಶದ ಸಂಪತ್ತು ಏಕರೀತಿಯಾಗಿ ಅಭಿವೃದ್ಧಿಸ್ಥಿತಿಗೆ ಬರುತ್ತಿರುವ ವಿಷಯಗಳಲ್ಲಿಯೂ, ಪ್ರಜೆಗಳ ಸುಖಸಂಪತ್ತು ಹೆಚ್ಚಿಸಬೇಕೆಂಬ ಮನಃಪೂರ್ವಕವಾದ ಉದ್ದೇಶದೊಡನೆ ಸಂಸ್ಥಾನದ ಪುರೋವೃದ್ಧಿಯನ್ನೂ, ದ್ರವ್ಯೋತ್ಪತ್ತಿ ಸಾಧನಗಳನ್ನೂ, ಪುಷ್ಟೀಕರಿಸುವದಕ್ಕೋಸ್ಕರ, ತಕ್ಕಾಗಲೇ ಅನುಸರಿಸಿರುವ ಕನ್ನಂಬಾಡಿ ಪ್ರಾಜೆಕ್ಟು, ಕಾನಕಾನಹಳ್ಳಿ ತಾಲ್ಲೂಕು ಬನಹಳ್ಳಿ ಅಥವಾ ಮೊವತ್ತೂರುಕೆರೆ, ರಾಜಮಾಕನಹಳ್ಳಿಕೆರೆ ಮೊದಲಾದ ನೀರಾವರಿ ಕಾಂಗಾರಿಗಳೂ ಮತ್ತು ಮುಂದೆ ಅನುಸರಿಸಬೇಕೆಂದಿರುವ ಉತ್ಕೃಷ್ಟವಾದ ಏರ್ಪಾಡುಗಳೂ ನಿದರ್ಶನಕ್ಕೆ ಬರುತ್ತಿರುವುದೇ ಸಾಕ್ಷಿಯಾಗಿರುತ್ತೆ.

ಹಿಂದಕ್ಕೆ ಈ ರಾಜ್ಯ ಪಟ್ಟಾಭಿಷೇಕ ಮಹೋತ್ಸವವನ್ನಲಂಕರಿಸಿದ, ಶ್ರೀಮದ್ರಾಜಾಧಿರಾಜ ಶ್ರೀಮಚ್ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಸಾರ್ವಭೌಮರವರ ದಿವಾಣರಾಗಿದ್ದ ಮಹಾನುಭಾವರಾದ ರಂಗಾಚಾರ್ಯರವರು ರಾಜ್ಯಾಭಿವೃದ್ಧಿ ವಿಚಾರದಲ್ಲಿ ಮೊಡಿದ ನಾನಾತರವಾದ ಏರ್ಪಾಡುಗಳನ್ನು ಮೇಲ್ಪಂಚ್ತಿಯಾಗಿಟ್ಟುಕೊಂಡು, ತಮ್ಮ ಸ್ವಶಕ್ತಿ, ಬುದ್ಧಿ, ಕೌಶಲ್ಯ, ಸಾಹಸ, ಪರಾಕ್ರಮಗಳಿಂದ ರಾಜ್ಯಾಭಿವೃದ್ಧಿ ವಿಚಾರದಲ್ಲಿ ಉಂಟಾಗಿದ್ದ ಆದರ ಮತ್ತು ರಾಜಭಕ್ತಿ ವಿಶ್ವಾಸಕ್ಕಾಗಿ, ನಮ್ಮ ತಾವಂದಿರವರ ಪೂರ್ಣಾನುಗ್ರಹಕ್ಕೆ ಪಾತ್ರರಾಗಿದ್ದ ಕಾರಣದಿಂದ "ರಾಜ್ಯಧುರಂಧರ" ಎಂಬ ಬಿರುದನ್ನು ಸಂಪಾದಿಸಿದ, ಕೀರ್ತಿಶೇಷರಾದ ದಿವಾ ಸರ್. ಕುಮಾರ ಪುರಂ ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್. ಐ., ಯವರು ಮಾಡಿರತಕ್ಕ ಏರ್ಪಾಡುಗಳೂ, ಇಂಡಿಯಾ, ಅಮೇರಿಕಾ, ಮೊದಲಾದ ರಾಜ್ಯಗಳ ಇಂಜನೀರುಗಳ ಸ್ತೋತ್ರಾರ್ಹವಾದ ವಿದ್ಯುಚ್ಛಕ್ತಿ ಇಲಾಖಾ, ಮೈಸೂರಿಕಣಿವೆ, ಬೋರನಕಣಿವೆ, ಮೊವತ್ತೂರು, ಮೊದಲಾದ ನೀರಾವರಿ ಕಾಮಗಾರಿಗಳ ಅಭಿವೃದ್ಧಿಯೂ, ಮತ್ತು ಆಬ್ಕಾರಿ, ಫಾರೆಸ್ಟು, ಮೆಡಿಕಲ್, ರೆವಿನ್ಯೂ, ಮೊದಲಾದ ನಾನಾ ಇಲಾಖೆಗಳಲ್ಲಿ ಮಾಡಿರತಕ್ಕ ಅಭಿವೃದ್ಧಿಗಳೂ ಸಹ, ಸಮಸ್ತ ಇಲಾಖಾ ಆಫೀಸರುಗಳಿಗೂ, ಪ್ರಜೆಗಳಿಗೂ, ಗೋಚರವಾಗುವಂತೆ ಸಂಸ್ಥಾನದ ರಿಕಾರ್ಡುಗಳೇ ಸಾಕ್ಷಿಯಾಗಿರುತ್ತವೆ. ಮತ್ತು ಈ ಮಹಾನುಭಾವರ ಕಾಲದಲ್ಲಿಯೇ ಕೆಳಗೆ ನಮೂದಾಗುವ ವಿಷಯಗಳು ನೆರವೇರಿಸಬಹುದಾಗಿತ್ತು. ಪ್ರಜೆಗಳ ದೌರ್ಭಾಗ್ಯದಿಂದ ಅವರು ವಿಶ್ರಮಿಸಿಕೊಳ್ಳಲು ಅವಕಾಶ ವುಂಟಾಯಿತು.

ಸ್ವದೇಶದ ಸಂಪತ್ತು ಹೆಚ್ಚಿಸಬೇಕೆಂಬ ಉದ್ದೇಶದಲ್ಲಿ ಮುಖ್ಯ ಭಾಗಗಳಾಗಿರುವ ಅಂಶ ಅಂದರೆ, ಈ ರಾಜ್ಯದಲ್ಲಿರತಕ್ಕ ಸುಮಾರು ೩೬,೦೦೦ ಕೆರೆಗಳಪೈಕಿ, ಶಾಸ್ತ್ರಪರಿಶ್ರಮವುಳ್ಳ ಆಫೀಸರುಗಳ ಸ್ವಾಧೀನದಲ್ಲಿರುವ ಸುಮಾರು ೮೦೦ ಕೆರೆಗಳ ಶಿವಾಯಿ, ಉಳಿದಿರುವ ಕೆರೆಗಳಲ್ಲಾ ಬಂಧವಿಮೋಚನೆ ಆದ ೧೪೩೬–೩೭ನೇ ಇಸವಿ ಹಿಂದೆ ಲಾಗಾಯಿತು ಕಾಮಗಾರಿಗಳು ಇಲ್ಲದೇ ಹೀನಸ್ಥಿತಿಗೆ ಬಂದಿರುವ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ, ರೆವಿನ್ಯೂ ಇಲಾಖೆ ಮೂಲಕತ್ತು ಜುಜವಿ ಮೊಬಲಗಿನಿಂದ ಶೇಕಡ ೪–೫ ರಂತೆ ಕಾಮಗಾರಿ ನಡೆಯುತ್ತಾ ಕೋಡಿ ವ್ಯಾವಣಿಗಳಿಲ್ಲದೆ ಇದ್ದಾಗ್ಯೂ ರಾಜ್ಯಕ್ಕೆ ಪ್ರಾಪ್ತವಾಗಿರುವ ಕನಿಷ್ಠ ವರ್ಷಗಳ ಗುಣದಿಂದ ಸಕಾಲಕ್ಕೆ ಮಳೆ ಇಲ್ಲದೇ, ಅಕಾಲದಲ್ಲಿ ಪ್ರಾಪ್ತವಾಗುವ ಮಳೇನೀರು, ಕೆರೆ ಅಚ್ಚುಕಟ್ಟಿಗೆ ಸಾಕಾಗದೆ ಫಸಲು ಪೂರೈಸದೇ ಇರುವಕಾರಣ, ಪ್ರಜೆಗಳ ಜೀವನೋಪಾಯಕ್ಕೆ ಉಂಟಾಗಿರುವ ತೊಂದರೆಯು ನಿವಾರಣೆಯಾಗುವದಕ್ಕೆ ಈಗ ಸಕಾಲವಾಗಿರುತ್ತೆ. ಮಹಾಸ್ವಾಮಿ.

ಈ ರಾಜ್ಯದಲ್ಲಿ ಎಲ್ಲಾ ಬಾಬಿನ ಹುಟ್ಟುವಳಿಗಿಂತಲೂ, ಲ್ಯಾಂಡ್ ರೆವಿನ್ಯೂ ಬಾಬು ಅಂದರೆ ಜಮೀನು ಕಂದಾಯ ೧,೦೧,೫೦,೦೦೦ ರೂಪಾಯಿ ಹುಟ್ಟುವಳಿಗೆ ಅಧಾರವಾಗಿರುವ, ದನಗಳ ಪೋಷಣೆಗೆ, ಮೇಲೆನಾಡು ಡಿಸ್ಟ್ರಿಕ್ಟುಗಳು ವಿನಾ ಮೈದಾನ ಡಿಸ್ಟ್ರಿಕ್ಟುಗಳಲ್ಲಿ, ಆಹಾರಕ್ಕೆ ತಕ್ಕಷ್ಟು ತೃಣವಿಲ್ಲದೆ ಉಂಟಾಗಿರುವ ತೊಂದರೆಯೂ, ಪೇಪರುಗಳಲ್ಲಿ ಉದಹರಿಸುವದಕ್ಕೆ ಸಾಧ್ಯವಿಲ್ಲದೇ ಇರುತ್ತೆ. ಪ್ರಜಾಸಂಖ್ಯೆ ಹೆಚ್ಚುತ್ತಾ ಬರುವ ಭರವಸೆ ಮೇಲೂ, ರೆವಿನ್ಯೂ ಬಾಬು ಹೆಚ್ಚಿಸಬೇಕೆಂಬ ಉದ್ದೇಶದಿಂದಲೂ, ಸರ್ವೇ ಇಲಾಖೆ ಮೂಲಕತ್ತು ನಡಿಸಿದ ಸೋಜನಿಕಾಲದಲ್ಲಿ, ಸಾಗುವಳಿ ಲಾಯಕಿ', ನಾಲಾಯಕಿ' ಸೇರಿ, ಕೆಲವ್ಭಾಗ ನಂಬರು ಮಾಡಿ ಆಕಾರ ಭರಾಯಿಸಿರುವೆವಾಗಿದೆ. ಇಂಥಾ ಜಮೀನುಗಳ ಪೈಕಿ ಸಾಗುವಳಿ ಲಾಯಕಿ' ಸರ್ಕಾರಕ್ಕೆ ಉಳಿಸಿಕೊಂಡು ನಾಲಾಯಕಿ' ಜಮೀನುಗಳಿಗೆಲ್ಲಾ ಮೆಲೆನಾಡು ಡಿಸ್ಟ್ರಿಕ್ಟುಗಳಲ್ಲಿ ವಿಧಾಯಕವಾಗಿರುವಂತೆ ನೀವೇ ಕಂದಾಯದ ಮೂಲಕ ಗೋಗ್ರಾಸವನ್ನು ಒದಗಿಸುವದರಿಂದ, ದನಗಳಿಗೆ ಖುವ್ವತ್ತು ಉಂಟಾಗಿ, ಗೊಬ್ಬರದನುಕೂಲತೆ ಹೆಚ್ಚಿ ರಾಜ್ಯಸಮೃದ್ಧಿಗೆ, ಭೂ ವ್ಯವಸಾಯವೇ ಗುರಿಯಾಗಿರುವದು ಸಮಸ್ತ ರಾಜ್ಯಗಳಲ್ಲಿಯೂ ನಿದರ್ಶನವಾಗಿರುವ ಪ್ರಜೋಪಕಾರವಾದ ಪ್ರಾರ್ಥನೆಗಳನ್ನು ಶಾಂತಚಿತ್ತರಾಗಿ ಸಾವಧಾನದಿಂದ ಸಫಲಗೊಳಿಸಲು ಮಂತ್ರಾಲೋಚನ ಸಭೆಯಲ್ಲಿ ನಿರ್ಧರಿಸಬೇಕೆಂದು ಪ್ರಾರ್ಥಿಸುವ ಪ್ರಜೆಗಳ ಪ್ರತಿನಿಧಿಗಳಾಗಿ ಮಹಾ ಸನ್ನಿಧಾನದಲ್ಲಿ ಉಲ್ಲಾಸದಿಂದ ಅರಿಕೆ ಮಾಡಿಕೊಳ್ಳುತ್ತೇವೆ. ಸ್ವಾಮಿ.

ವಿಷಯಾಂತರಂಗಳಲ್ಲಿ ಲೋಪಗಳು, ವೈಪರೀತ್ಯಶಬ್ದಗಳಿನಾದರೂ ಇದ್ದರೆ, ಕ್ಷಮಾಪಣೆಯನ್ನು ಬೇಡಿ ಕೊಳ್ಳುತ್ತೇವೆ. ಸ್ವಾಮಿ,

ತಮ್ಮ ಅತ್ಯಂತ ವಿಧೇಯರು,

ರಾಮೇಗೌಡರು,	ಬೈರೇಗೌಡರು, ಗಿಡ್ಡೇಗೌಡರು,	
ಮಾಲೂರು.	ಕೋಲಾರ.	
ಹೂಡಿ ಗುರುವಾರೆಡ್ಡಿ, ಬೆಂಗಳೂರು ತಾಲ್ಲೂಕು.	ವೀರಪ್ಪರೆಡ್ಡಿ, ಬೆಂಗಳೂರು ತಾಲ್ಲೂಕು.	ಸುಬ್ಬರೆಡ್ಡಿ, ಚಿಂತಾಮಣಿ ತಾಲ್ಲೂಕು.

Dewan's reply to the Addresses.

REPRESENTATIVES OF THE KOLAR GOLD FIELD MINING BOARD, THE CENTRAL MAHOMEDAN ASSOCIATION, THE SADANANDA VARDHINI SABHA OF MELKOTE, THE LINGAYET EDUCATION FUND ASSOCIATION, MEMBERS FOR THE TUMKUR DISTRICT AND FOR THE NAGAMANGALA AND MALUR TALUKS :—

GENTLEMEN.—I desire to express my sincere thanks to you for the addresses you have now presented to me and for the appreciative terms in which you have referred to the administration of the State.

The addresses contain references to several subjects of local interest and importance, but as the contents of these addresses came to my notice for the first time only yesterday morning, and as most of the questions raised in them find a place among the representations which we shall take up for detailed consideration during the rest of our session, I shall not detain you with any but the briefest observations regarding them.

As regards the proposal to give power to the Superintendent of Police to deal with undesirable persons in the Kolar Gold Field Mining area, I may state that a Bill has been prepared to amend the provisions of the Mysore Mines Regulation and is now before the Legislative Council.

The suggestion for amending the existing law by providing for the summary trial of cases of unlawful possession of mining material of less than Rs. 50 in value, will be carefully examined, and before coming to a decision in the matter, Government will give due weight to the representations of the Mining Board.

The remaining requests of the Mining Board are already under consideration in the respective departments of Government. They all involve more or less additional expenditure and will receive attention in the order of their urgency and importance.

The request of the representatives of Koppa for the extension of railway service to that town will be noted for consideration. I have already announced that sanction has been received for the construction of a 2-feet guage tramway from Tarikere to Yedahalli.

In some of the addresses, reference is made to the paucity of representatives of special communities in the public service, in the Legislative Council and other bodies. I may assure you that Government are fully alive to the need for giving reasonable facilities to encourage backward classes. But I must remind you that owing to the growing complexity of modern administration, a higher standard of average attainment and capacity for the public service has now to be insisted on than was necessary a decade or two ago. The only way you can help your respective communities to gain admission into Government service is by educating your young men.

Some of the addresses now read come from bodies like the Lingayet Education Fund Association and the Central Mahomedan Association, which are all associations composed of members of important sections of the people whose main object is to spread secular education among the communities concerned. His Highness' Government greatly appreciate the efforts that are being made by these bodies to ameliorate the condition of their respective communities.

As you are aware, there is a vast field for work of this character among all classes and sections of the people and Government will always be glad to help organizations formed with the object of promoting education and the moral and material welfare of the people.

I may refer here to only one or two spheres of work which eminently deserve the attention of the members of this Assembly and the true natural leaders of the people. In my Address, I have drawn attention pointedly to the condition of our villages and the vast possibilities of improvement before them, if only an organised effort is made for the purpose. Any movement intended to reach the remotest villages and the individual residents therein, should necessarily be carried out largely by private agencies. There must be many in the taluks capable of developing into unselfish leaders. If such men will rise and take the occasion by the hand, they have a noble opportunity of advancing the best interests of the rural population.

It gave me great pleasure to listen to the graceful reference in so many addresses to the return of His Highness the Yuvaraja from his European tour.

In conclusion, may I assure you, Gentlemen, that it will be my pleasing duty to place before His Highness the Maharaja, the sentiments of deep loyalty and devotion contained in your addresses.

Translation of the above.

ಕೋಲಾರದ ಚಿನ್ನದ ಗಣಿಯ ಬೋರ್ಡಿನವರೂ ಸೆಂಟ್ರಲ್ ಮಹಮ್ಮದೀಯ ಅಸೋಸಿಯೇಷನಿನವರೂ, ಮೇಲ್ಕೋಟೆ ಸದಾನಂದವರ್ಧಿನೀ ಸಭೆಯವರೂ, ಲಿಂಗಾಯತ ಎಜುಕೇಷನ್ ಫಂಡ್ ಅಸೋಸಿಯೇಷನಿನವರೂ, ತುಮಕೂರು ಡಿಸ್ಟ್ರಿಕ್ಟ್ ನಾಗೇಮಂಗಲ ಮಾಲೂರು ತಾಲ್ಲೂಕುಗಳ ಪ್ರತಿನಿಧಿಗಳೂ ಒಪ್ಪಿಸಿದ ಅಭಿನಂದನ ಪತ್ರಿಕೆಗಳಿಗೆ ದಿವಾನ್‌ರವರು ದಯ್ಪೈಪಾಲಿಸಿದ ಉತ್ತರಗಳ ಭಾಷಾಂತರ.

ಮಹಾಶಯರೇ,

ನೀವುಗಳು ನಮಗೆ ಇಂದು ಒಪ್ಪಿಸಿದ ಅಭಿನಂದನ ಪತ್ರಿಕೆಗಳಿಗಾಗಿಯೂ, ಸಂಸ್ಥಾನದ ಆಡಳಿತದ ವಿಷಯವಲ್ಲಿ ವಿಜ್ಞಾಪಿಸಿರುವ ಶ್ಲಾಘನೆ ವಚನಗಳಿಗಾಗಿಯೂ, ನಿಮಗೆ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ತಿಳಿಸಲಪೇಕ್ಷಿಸುತ್ತೇವೆ.

ಈ ಅಭಿನಂದನ ಪತ್ರಿಕೆಗಳಲ್ಲಿ ಆಯಾಸ್ಥಳಕ್ಕೆ 'ಸಂಬಂಧಪಟ್ಟುವುಗಳಾಗಿಯೂ ಅಲ್ಲಲ್ಲಿ ಮುಖ್ಯವಾದುವುಗಳಾಗಿಯೂ ಇರುವ ಅನೇಕ ವಿಷಯಗಳ ಪ್ರಸ್ತಾಪವು ಅಡಗಿರುತ್ತದೆ. ಆದರೆ ಈ ಪತ್ರಿಕೆಗಳಲ್ಲಿರುವ ಒಕ್ಕಣೆಗಳು ನಿನ್ನೆಯ ದಿನದ ಪ್ರಾತಃಕಾಲದವರೆಗೆ ನಮ್ಮ ದೃಷ್ಟಿಗೆ ಬರಲಿಲ್ಲವಾದುದರಿಂದಲೂ, ಅವುಗಳಲ್ಲಿ ಪ್ರಸ್ತಾಪಿಸಿರುವ ಅನೇಕ ಸಂಗತಿಗಳು ನೀವು ಕಳುಹಿಸಿರುವ ಅರಿಕೆಗಳಲ್ಲಿಯೇ ಸೇರಿದುವುಗಳಾಗಿ ಈ ಪ್ರತಿನಿಧಿ ಸಭೆಯು ನಡೆಯುವ ಕಾಲದಲ್ಲಿ ಅವುಗಳನ್ನು ತಪ್ಪಿಸಲಿವಾರಾಗಿ ನಾವು ಚರ್ಚಿಸಬೇಕಾಗಿರುವುದರಿಂದಲೂ ನಾವು ಈಗ ಅದಕ್ಕಾಗಿ ವಿಶೇಷಕಾಲವನ್ನು ಕಳೆಯದೆ ಅವುಗಳ ವಿಷಯವಲ್ಲಿ ನಮ್ಮ ಅಭಿಪ್ರಾಯವನ್ನು ಸೂಹ್ಮವಾಗಿ ತಿಳಿಸುವೆವು.

ಕೋಲಾರದ ಚಿನ್ನದಗಣಿ ಪ್ರದೇಶದೊಳಗೆ ಬಿದ್ದ ಚಾಲಿಪೆರಸ್ಥ ವಿಷಯದಲ್ಲಿ ಕ್ರಮ ನಡಿಸುವುದಕ್ಕೋಸ್ಕರ ಪೊಲೀಸು ಸೂಪರ್‌ಟೆಂಡೆಂಟರವರಿಗೆ ತಕ್ಕ ಅಧಿಕಾರವನ್ನು ಕೊಡಬೇಕೆಂದು ಮಾಡಿರುವ ಸಲಹೆಯ ವಿಷಯದಲ್ಲಿ, ಮೈಸೂರು ಗಣಿಗಳ ರೆಗ್ಯುಲೇಷನ್ನನ್ನು ತಿದ್ದುಪಾಟು ಮಾಡುವುದಕ್ಕೆ ಬಂದು ಮಸೂದಾ ಕಾನೂನು ಸಿದ್ಧವಾಗಿರುವುದಲ್ಲದೆ ಅದನ್ನು ಈಗ ನ್ಯಾಯವಿಧಾಯಕ ಸಭೆಯವರು ಪರಾಮರ್ಶೆಲೋಚಿಸುತ್ತಿದಾರೆಂದು ನಿಮ್ಮುಗಳಿಗೆ ತಿಳಿಸಬೇಕಾಗಿದೆ.

ಐವತ್ತು ರೂಪಾಯಿಗಿಂತ ಕಮ್ಮಿಯಾದ ಬೆಲೆಯುಳ್ಳ ಗಣಿಯ ಸಾಮಾನನ್ನು ಆಕ್ರಮಸ್ವಾಧೀನದಲ್ಲಿ ಇಟ್ಟುಕೊಂಡಿರುವುದಾಗಿ ಬರುವ ಮೊಕದ್ದಮೆಗಳನ್ನು ಸೂಟಾಗಿ ವಿಚಾರಣೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸುವುದರಮೂಲಕ ಈಗಿರತಕ್ಕ ಕಾನೂನನ್ನು ತಿದ್ದುಪಾಟು ಮಾಡಬೇಕೆಂದು ತಿಳಿಸಿರುವ ಸಲಹೆಯನ್ನು ಜಾಗರೂಕತೆಯಿಂದ ಪರೀಕ್ಷಿಸಲಾಗುವುದು ಮತ್ತು ಈ ವಿಷಯದಲ್ಲಿ ಯಾವುದೊಂದು ತೀರ್ಮಾನ ಮಾಡುವುದಕ್ಕೆ ಮೊದಲು, ಗಣಿಯ ಬೋರ್ಡಿನವರು ಮಾಡಿರತಕ್ಕ ಶಿಕೆಗಳನ್ನು ಸರ್ಕಾರದವರು ಉಚಿತರೀತಿಯಲ್ಲಿ ಪರ್ಯಾಲೋಚಿಸುವರು.

ಗಣಿಯ ಬೋರ್ಡಿನವರು ಕೇಳಿಕೊಂಡಿರುವ ಇತರ ವಿಷಯಗಳು ಸರ್ಕಾರದ ಆಯಾ ಇಲಾಖೆಗಳವರ ಪರ್ಯಾಲೋಚನೆಯಲ್ಲಿರುತ್ತವೆ. ಅವುಗಳಿಗೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಹೆಚ್ಚು ಖರ್ಚು ಮುಟ್ಟುವುದು. ಆದುದರಿಂದ ಅವುಗಳ ಆತುರತೆಯೂ ಗೌರವವೂ ಇದ್ದ ಹಾಗೆಲ್ಲ ಅವುಗಳಿಗೆ ಗಮನ ಕೊಡಲಾಗುವುದು.

ಕೊಪ್ಪದ ಪ್ರತಿನಿಧಿಗಳು ತಮ್ಮ ಊರಿನವರೆಗೂ ರೈಲ್ವೆ ಹಾಕಿಸಿಕೊಡಬೇಕೆಂದು ತಿಳಿಸಿರುವ ಅರಿಕೆಯನ್ನು ಪರ್ಯಾಲೋಚನೆಗಾಗಿ ಬರೆದುಕೊಳ್ಳಲಾಗುವುದು. ತರೀಕೆರೆಯಿಂದ ಎಡೆಹಳ್ಳಿಗೆ ಎರಡಡಿಗಳ ಅಗಲವುಳ್ಳ ಟ್ರಾಂವೆಯನ್ನು ಹಾಕತಕ್ಕ ವಿಷಯದಲ್ಲಿ ಮುಂಜಾರಾತಿಯನ್ನು ಪಡೆಯಲಾಗಿದೆ ಎಂಬದಾಗಿ ನಾವು ಮೊದಲೇ ತಿಳಿಸಿರುತ್ತೇವೆ.

ಕೆಲವು ಅಭಿನಂದನ ಪತ್ರಿಕೆಗಳಲ್ಲಿ ಸರ್ಕಾರೀ ನೌಕರಿಯಲ್ಲಿಯೂ ನ್ಯಾಯವಿಧಾಯಕ ಸಭೆಯೇ ಮೊದಲಾದುವುಗಳಲ್ಲಿಯೂ ಕೆಲವು ಪಂಗಡಗಳವರು ಬಹು ಸ್ವಲ್ಪ ಜನರಿರುತ್ತಾರೆಂದು ತಿಳಿಸಲಾಗಿದೆ. ಹಿಂದುಳಿದಿರುವ ಪಂಗಡಗಳವರನ್ನು ಪ್ರೋತ್ಸಾಹಿಸುವುದಕ್ಕೆ ನ್ಯಾಯವಾದ ಸೌಲಭ್ಯಗಳನ್ನು ಕೊಡುವುದು ಅವಶ್ಯವೆಂಬ ವಿಷಯವನ್ನು ಸರ್ಕಾರದವರು ಚನ್ನಾಗಿ ತಿಳಿದಿರುತ್ತಾರೆಂಬ ಅಂಶವನ್ನು ನಿಮಗೆ ದೃಢವಾಗಿ ತಿಳಿಸುತ್ತೇವೆ. ಆದರೆ ಈ ಸಂದರ್ಭದಲ್ಲಿ ನಿಮಗೆ ತಿಳಿಸಬೇಕಾಗಿರುವ ಮತ್ತೊಂದು ಸಂಗತಿ ಏನೆಂದರೆ, ಈಗಿನ ರಾಜ್ಯಭಾರಕ್ರಮದಲ್ಲಿ ದಿನೇ ದಿನೇ ತೊಡಕು ಹೆಚ್ಚುತ್ತಲಿರುವುದರಿಂದ, ಹತ್ತು ಅಥವಾ ಇಪ್ಪತ್ತು ವರ್ಷಗಳಕೆಳಗೆ ಇದ್ದದ್ದಕ್ಕಿಂತ ಈಗ ಅಧಿಕವಾದ ವಿದ್ಯಾಜ್ಞಾನವೂ ಸರ್ಕಾರೀ ನೌಕರಿಯನ್ನು ನಿರ್ವಹಿಸುವ ಸಾಮರ್ಥ್ಯವೂ ಇರಬೇಕೆಂಬ ನಿರ್ಬಂಧವನ್ನು ಕಲ್ಪಿಸಬೇಕಾಗಿದೆ. ನಿಮ್ಮ ನಿಮ್ಮ ಪಂಗಡದವರಿಗೆ ಸೈಕ್ಯರಿ ನೌಕರಿಯಲ್ಲಿ ಪ್ರವೇಶವುಂಟಾಗುವಂತೆ ಮಾಡಬೇಕಾದರೆ ನಿಮ್ಮಲ್ಲಿರುವ ತರುಣರಿಗೆ ತಕ್ಕಷ್ಟು ವಿದ್ಯಾಭ್ಯಾಸವನ್ನು ಮಾಡಿಸುವುದೊಂದೇ ಉಪಾಯವೆಂದು ತಿಳಿಯಬೇಕು.

ಈಗ ಓದಿದ ಅಭಿನಂದನ ಪತ್ರಿಕೆಗಳಲ್ಲಿ ಕೆಲವು ಲಿಂಗಾಯತ ಫಂಡ್, ಅಸೋಸಿಯೇಷನ್, ಸೆಂಟ್ರಲ್ ಮಹಮ್ಮದೀಯ ಅಸೋಸಿಯೇಷನ್ ಮೊದಲಾದ ಸಂಘಗಳವರು ಬಿಟ್ಟಿಸಿದ್ದವುಗಳಾಗಿವೆ. ಈ ಸಂಘಗಳೆಲ್ಲ ದ್ವೇಷದ ಪ್ರಜೆಗಳಲ್ಲಿ ಮುಖ್ಯ ಮುಖ್ಯವಾದ ಪಂಗಡದವರು ಮಾಡಿಕೊಂಡಿರತಕ್ಕವುಗಳಾಗಿರುವುದಲ್ಲದೆ, ತಮ್ಮ ತಮ್ಮ ಪಂಗಡಕ್ಕೆ ಸೇರಿದವರೊಳಗೆ ಲೌಕಿಕವಿದ್ಯೆ ಹರಡಿಕೊಳ್ಳುವಂತೆ ಮಾಡತಕ್ಕದ್ದೇ ಅವರ ಮುಖ್ಯೋದ್ದೇಶವಾಗಿದೆ. ಇವರುಗಳು ತಮ್ಮ ತಮ್ಮ ಪಂಗಡದವರ ಸ್ಥಿತಿ ಗತಿಗಳನ್ನು ಉತ್ತಮಪಡಿಸಲು ಮಾಡುತ್ತಿರುವ ಪ್ರಯತ್ನಗಳನ್ನು ಶ್ರೀಮನ್ಮಹಾರಾಜರವರ ಸರ್ಕಾರದವರು ಬಹಳವಾಗಿ ಕೊಂಡಾಡುತ್ತಾರೆ.

ನಿಮಗೆಲ್ಲ ತಿಳಿದಿರುವಂತೆ ಎಲ್ಲಾ ಜಾತಿಗಳ ಅಥವಾ ಪಂಗಡಗಳ ಜನಗಳಲ್ಲಿ ಈ ವಿಧವಾದ ಕೆಲಸವನ್ನು ನಡಿಸಲು ವಿಶೇಷವಾಗಿ ಅವಕಾಶವುಂಟು. ಜನಗಳ ವಿದ್ಯಾಭ್ಯಾಸವನ್ನೂ ಶೀಲಸ್ವಭಾವಗಳನ್ನೂ ಉಪಪತ್ತಿಯನ್ನೂ ಹೆಚ್ಚಿಸಬೇಕೆಂಬ ಉದ್ದೇಶದಿಂದ ಕೆಲವು ಜನರು ಕ್ರಮವಾಗಿ ಏರ್ಪಡಿಸಿಕೊಳ್ಳುವ ಸಂಘಗಳಿಗೆ ಸಹಾಯ ಮಾಡಲು ಸರ್ಕಾರದವರು ಯಾವಾಗಲೂ ಸಿದ್ಧರಾಗಿರುವರು.

ಈ ಸಭೆಯ ಮೆಂಬರುಗಳಲ್ಲೂ ಪ್ರಜೆಗಳಲ್ಲಿ ನಿಜವಾಗಿ ಸ್ವೋದ್ಯೋಗಿಗಳಾಗಿರುವರೂ ವಿಶೇಷಾಸಕ್ತಿಯಿಂದ ಲಕ್ಷಿಸಬೇಕಾದ ಬಂದೆರಡು ಕೆಲಸಗಳನ್ನು ಇಲ್ಲಿ ತಿಳಿಸಬಯಸುತ್ತಾಗಿದೆ. ನಮ್ಮ ಉಪಜೀವನದಲ್ಲಿ ನಮ್ಮ ಗ್ರಾಮಗಳಿರುವ ಸ್ಥಿತಿಯನ್ನೂ, "ಅವುಗಳ ಅಭಿವೃದ್ಧಿಗಾಗಿ ಕೆಲವರು ಸೇರಿ ತಕ್ಕಪ್ರಯತ್ನಗಳನ್ನು ಮಾಡಿದರೆ ಅವು ವೃದ್ಧಿಗೆಬರಲು ತುಂಬಾ ಅವಕಾಶವಿರುತ್ತೆಂಬ ವಿಷಯವನ್ನೂ ಕರಿತು ತಿಳಿಸಿರುತ್ತೇವೆ. ಬಹುದೂರದಲ್ಲಿರುವ ಗ್ರಾಮಗಳಿಗೂ ಅವುಗಳಲ್ಲಿರುವ ಪ್ರತಿಯೊಬ್ಬರಿಗೂ ವ್ಯಾಪಿಸಬೇಕೆಂದು ಉದ್ದೇಶಿಸಲ್ಪಟ್ಟ ಯಾವ ಕಾರ್ಯವೆನ್ನಾಗಲಿ ವಿಶೇಷವಾಗಿ ಖಾಸಗಿ ಜನಗಳೇ ಸಾಧಿಸಬೇಕಾದದ್ದು ಅವಶ್ಯಕವು. ಸ್ವಾರ್ಥವೆನ್ನು ತೊರೆದು ಪರಾರ್ಥಿಗಳಾಗುವ ಶಕ್ತಿಯುಳ್ಳವರನೇಕರು ತಾಲ್ಲೂಕುಗಳಲ್ಲಿ ಇದ್ದೇ ಇರುತ್ತಾರೆ. ಅಂತಹ ಮಹನೀಯರು

ಮುಂದಕ್ಕೆ ಬಂದು ಉದ್ಯೋಗಿಸ ತೊಡಗಿದರೆ ಗ್ರಾಮವಾಸಿಗಳನ್ನು ಸರ್ವೋತ್ತಮ ಸ್ಥಿತಿಗೆ ತರಲು ಅವರಿಗೆ ಉತ್ಕೃಷ್ಟವಾದ ಅವಕಾಶವು ದೊರೆಯುವುದು.

ನಮ್ಮ ಶ್ರೀಮದ್ಯುವರಾಜರವರು ಯೂರೊಪ್ ಖಂಡದಲ್ಲಿ ಸಂಚಾರವನ್ನು ಪೂರಯಿಸಿಕೊಂಡು ಪುನಃ ರಾಜಧಾನಿಗೆ ದಯಮಾಡಿಸಿದ ವಿಷಯವನ್ನು ಅನೇಕ ಅಭಿನಂದನ ಪತ್ರಿಕೆಗಳಲ್ಲಿ ಉಚಿತರೀತಿಯಲ್ಲಿ ಪ್ರಸ್ತಾಪಿಸಿರುವುದನ್ನು ಕೇಳಿ ನಮಗೆ ಬಹು ಸಂತೋಷವಾಯಿತು.

ಮಹಾಶಯರೆ, ನಿಮ್ಮ ನಿವ್ಮ ಅಭಿನಂದನ ಪತ್ರಿಕೆಗಳಲ್ಲಿ ನೀವುಗಳು ಸ್ಪಷ್ಟವಾಗಿ ತಿಳಿಸಿರತಕ್ಕ ಅತಿಶಯವಾದ ರಾಜಭಕ್ತಿ ವಿಶ್ವಾಸಗಳನ್ನು ಶ್ರೀಮನ್ಮಹಾರಾಜರವರಿಗೆ ವಿಜ್ಞಾಪಿಸುವುದು ನಮ್ಮ ಸಂತೋಷಕರವಾದ ಕರ್ತವ್ಯವಾಗಿದೆ ಎಂಬದಾಗಿ ದೃಢವಾದ ವಾಕ್ಯುಗಳಿಂದ ನಿಮಗೆ ತಿಳಿಯಪಡಿಸುತ್ತೇವೆ.